ಕರ್ನಾಟಕ ಸರ್ಕಾರ
Government of Karnataka

ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

This sheet can be used for any document

Date of execution 5/10/10 Total stamp duty paid Rs. 137730

11555
10-11

# ಸ್ಥಿರ ಸ್ವತ್ತಿನ ಶುದ್ಧ ಕ್ರಯ ಪತ್ರ

ದಿನಾಂಕ : 05-10-2010

ಸನ್ ಎರಡು ಸಾವಿರದ ಹತ್ತನೇ ಇಸವಿ ಅಕ್ಟೋಬರ್ ಮಾಹೇ ತಾರೀಖು ಐದರಲ್ಲೂ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ.ಮರಪ್ಪ ರವರ ಮಗ ಸುಮಾರು 28 ವರ್ಷ ವಯಸ್ಸುಳ್ಳ **ಶ್ರೀ.ಶಿವಜೀರ** ರವರಿಗೆ.,

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕುಂಬ್ರಹಳ್ಳಿಮಠ ಗ್ರಾಮದಲ್ಲಿ ವಾಸವಾಗಿರುವ ಲೇಟ್.ಕಾಳಸಿದ್ದೇಗೌಡರವರ ಮಗ ಮಕ್ಕಳಾದ ಒಂದನೇ ಮಗ ಸುಮಾರು 63 ವರ್ಷ ವಯಸ್ಸುಳ್ಳ **ಶ್ರೀ.ಸಿದ್ದಯ್ಯ** ಮತ್ತು ನನ್ನ ಧರ್ಮಪತ್ನಿ **ಶ್ರೀಮತಿ.ಪುಟ್ಟಮ್ಮ** ಹಾಗೂ ನಮ್ಮ ಮಕ್ಕಳುಗಳಾದ ಒಂದನೇ ಮಗ ಸುಮಾರು 31 ವರ್ಷ ವಯಸ್ಸುಳ್ಳ **ಶ್ರೀ.ಸಿದ್ದರಾಜು** ಮತ್ತು ಈತನ ಧರ್ಮಪತ್ನಿ ಸುಮಾರು 24 ವರ್ಷ ವಯಸ್ಸುಳ್ಳ **ಶ್ರೀಮತಿ.ಸುನೀತ** ಇವರ ಮೈನರ್ ಮಕ್ಕಳುಗಳಾದ ಒಂದನೇ ಮಗಳು ಸುಮಾರು 04 ವರ್ಷ ವಯಸ್ಸುಳ್ಳ ರಕ್ಷಿತಾ, ಎರಡನೇ ಮಗ ಸುಮಾರು 03 ವರ್ಷ ವಯಸ್ಸುಳ್ಳ ಕೆಂಪರಾಜು, ಇವರ ಮೈನರ್ ಗಾರ್ಡಿಯನ್ ಆಗಿ ಜನಕ ತಂದೆ ಸಿದ್ದರಾಜು ಸದರಿ ಸಿದ್ದಯ್ಯರವರ ಎರಡನೇ ಮಗಳು ಸುಮಾರು 28 ವರ್ಷ ವಯಸ್ಸುಳ್ಳ **ಶ್ರೀಮತಿ.ಲಕ್ಷ್ಮಿ** ಮೂರನೇ ಮಗ ಸುಮಾರು 25 ವರ್ಷ ವಯಸ್ಸುಳ್ಳ **ಶ್ರೀ.ಕೆಂಪರಾಜು ಉರುಫ್ ಕೆಂಪಣ್ಣ** ಮತ್ತು ಸದರಿ ಲೇಟ್.ಕಾಳಸಿದ್ದೇಗೌಡರವರ ಎರಡನೇ ಮಗ ಸುಮಾರು 59 ವರ್ಷ ವಯಸ್ಸುಳ್ಳ **ಶ್ರೀ.ಕೆಂಪಣ್ಣ** ಮತ್ತು ನನ್ನ ಧರ್ಮಪತ್ನಿ ಸುಮಾರು 49 ವರ್ಷ ವಯಸ್ಸುಳ್ಳ **ಶ್ರೀಮತಿ.ಜವರಮ್ಮ** ಹಾಗೂ ನಮ್ಮ ಮಕ್ಕಳುಗಳಾದ ಒಂದನೇ ಮಗಳು ಸುಮಾರು 28 ವರ್ಷ ವಯಸ್ಸುಳ್ಳ **ಶ್ರೀಮತಿ.ಪದ್ಮ** ಎರಡನೇ ಮಗಳು ಸುಮಾರು 26 ವರ್ಷ ವಯಸ್ಸುಳ್ಳ **ಶ್ರೀಮತಿ.ಮಾಲಾ** ಮೂರನೇ ಮಗಳು ಸುಮಾರು 24 ವರ್ಷ ವಯಸ್ಸುಳ್ಳ **ಕುಮಾರಿ.ಸ್ವಾತಿ ಉರುಫ್ ಸಾಕಮ್ಮ** ಸದರಿ ಲೇಟ್.ಕಾಳಸಿದ್ದೇಗೌಡರವರ ಮೂರನೇ ಮಗ ಸುಮಾರು 55 ವರ್ಷ ವಯಸ್ಸುಳ್ಳ **ಶ್ರೀ.ಕರಿಯಪ್ಪ** ಮತ್ತು ನನ್ನ ಧರ್ಮಪತ್ನಿ ಸುಮಾರು 46 ವರ್ಷ ವಯಸ್ಸುಳ್ಳ

11555

ಕರ್ನಾಟಕ ಸರ್ಕಾರ
Government of Karnataka

ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

ದಸ್ತಾವೇಜು ಹಾಳೆ
Document Sheet

ಬೆಲೆ: ರೂ. 2/-

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು
This sheet can be used for any document

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ
Date of execution

ಪಾವತಿಸಿದ ಒಟ್ಟು ಮುದ್ರಾಂಕ ಶುಲ್ಕ ರೂ.
Total stamp duty paid Rs.



**ಶ್ರೀಮತಿ.ಭಾಗ್ಯಮ್ಮ** ಹಾಗೂ ನಮ್ಮ ಮಕ್ಕಳುಗಳಾದ ಒಂದನೇ ಮಗ ಸುಮಾರು 23 ವರ್ಷ ವಯಸ್ಸುಳ್ಳ **ಶ್ರೀ.ಪ್ರಕಾಶ್** ಎರಡಡನೇ ಮಗ ಸುಮಾರು 20 ವರ್ಷ ವಯಸ್ಸುಳ್ಳ **ಶ್ರೀ.ಸಿದ್ದಪ್ಪ** ಆದ ನಾವುಗಳು ಸೇರಿ ಬರೆದುಕೊಟ್ಟ ಸ್ಥಿರ ಸ್ವತ್ತಿನ ಶುದ್ಧಕ್ರಯಪತ್ರದ ಕ್ರಮವೇನೆಂದರೆ,

ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತು ನಮಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತಾಗಿದ್ದು, ನಂತರ ಮೈಸೂರು ತಾಲ್ಲೂಕು ಕಛೇರಿಯಲ್ಲಿ ಎಂ.ಆರ್.ನಂ.44/2008-09 ಖಾತಾ ನಂ.90 ರ ಆದೇಶದ ಮೇರೆ ಕೆಂಪಣ್ಣ, ಕರಿಯಪ್ಪ ಮತ್ತು ಸಿದ್ದಯ್ಯ ಆದ ನಮ್ಮಗಳ ಹೆಸರಿನಲ್ಲಿ ಜಂಟಿ ಖಾತೆ ಹೊಂದಿದ್ದು, ಈ ತಹಲ್‌ವರೆವಿಗೂ ಕಂದಾಯವನ್ನು ಪಾವತಿ ಮಾಡಿ, ಹಾಲೀ ನಮ್ಮಗಳ ಸಂಪೂರ್ಣ ಮಾಲೀಕತ್ವ ಮತ್ತು ಹಕ್ಕು ಬಾಧ್ಯತೆಗೆ ಸೇರಿ ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿರುತ್ತದೆ.

ಷೆಡ್ಯೂಲ್ ಸ್ವತ್ತನ್ನು ನಾವು ನಮ್ಮ ಇಷ್ಟಾನುಸಾರ ವಿಕ್ರಯಿಸಲು ಸಂಪೂರ್ಣ ಸ್ವತಂತ್ರರಾಗಿಯೂ ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಸಹಾ ಇರುತ್ತೇವೆ. ಷೆಡ್ಯೂಲ್ ಸ್ವತ್ತಿಗೆ ನಾವಲ್ಲದೆ ಮತ್ತ್ಯಾರು ವಾರಸುದಾರರು ಹಕ್ಕು ಪಡೆಯುವವರು ಸಹ ಇರುವುದಿಲ್ಲ.

ಷೆಡ್ಯೂಲ್ ಸ್ವತ್ತನ್ನು ನಮ್ಮ ಸೌಕರ್ಯಕ್ಕೆ ತಕ್ಕ ಅನುಕೂಲತೆಗಳನ್ನು ಮಾಡಿಕೊಳ್ಳಲು ಮತ್ತು ಗೃಹ ಕೃತ್ಯದ ಖರ್ಚಿಗಾಗಿ ಹಣದ ಅವಶ್ಯಕತೆ ಇರುವುದರಿಂದ ಷೆಡ್ಯೂಲ್ ಸ್ವತ್ತನ್ನು ಭಾರತ ಸರ್ಕಾರದಲ್ಲಿ ಚಲಾವಣೆಯಲ್ಲಿರುವ ನಗದು ಗೌರ್ನಮೆಂಟ್ ಮೊಬಲಗು ರೂ.2,02,500/- (ಎರಡು ಲಕ್ಷದ ಎರಡು ಸಾವಿರದ ಐದುನೂರು ರೂಪಾಯಿ) ಗಳಿಗೆ ಶುದ್ಧ ಕ್ರಯಕ್ಕೆ ಕೊಟ್ಟಿರುತ್ತೇವೆ.

ಕ್ರಯದ ಪ್ರತಿಫಲದ ಮೊಬಲಗು ರೂ.2,02,500/- (ಎರಡು ಲಕ್ಷದ ಎರಡು ಸಾವಿರದ ಐದುನೂರು ರೂಪಾಯಿ) ಗಳನ್ನು ನಗದಾಗಿ ಈ ಕೆಳಕಂಡ ಸಾಕ್ಷಿಗಳ ಸಮಕ್ಷಮ ಪಡೆದುಕೊಂಡಿರುತ್ತೇವೆ. ಈ ರೀತಿಯಾಗಿ ಕ್ರಯದ ಪೂರ್ತಾ ಮೊಬಲಗು ಸಂದಾಯವಾಗಿರುತ್ತದೆ. ಈ ಕ್ರಯದ ವ್ಯವಹಾರಕ್ಕಾಗಿ ಮತ್ತ್ಯಾವ ಪ್ರತಿಫಲ ಬಾಕಿ ಬರಬೇಕಾಗಿರುವುದಿಲ್ಲ.

ಕರ್ನಾಟಕ ಸರ್ಕಾರ
Government of Karnataka

ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು
This sheet can be used for any document

ದಸ್ತಾವೇಜನ್ನು ಬರೆದುಕೊಟ್ಟ ದಿನಾಂಕ
Date of execution

ಪಾವತಿಸಿದ ಒಟ್ಟು ಮುದ್ರಾಂಕ ಶುಲ್ಕ ರೂ.
Total stamp duty paid Rs.



ಕ್ರಯದ ಸ್ವತ್ತಿನ ಸ್ವಾಧೀನವನ್ನು ಸರ್ವಮಾಲೀಕತ್ವದೊಡನೆ ಈ ದಿವಸವೇ ನಿಮ್ಮ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುತ್ತೇವೆ. ಷೆಡ್ಯೂಲ್ ಸ್ವತ್ತಿನಲ್ಲಿ ನಮಗಿರುವಂತಹ ಆಸಕ್ತಿ ವಿಶಿಷ್ಟ ಹಕ್ಕು ಬಾಧ್ಯತೆಗಳನ್ನು ಸಹಾ ನಿಮಗೆ ವಹಿಸಿಕೊಟ್ಟಿರುತ್ತೇವೆ. ಸ್ವತ್ತಿಗೆ ಸಂಬಂಧಪಟ್ಟ ಎಲ್ಲಾ ಅಸಲು ಕಾಗದಪತ್ರಗಳನ್ನು ನಿಮ್ಮ ವಶಕ್ಕೆ ಕೊಟ್ಟಿರುತ್ತೇವೆ.

ಷೆಡ್ಯೂಲ್ ಸ್ವತ್ತಿಗೆ ಈ ದಿನದ ಲಾಗಾಯ್ತು ನೀವೇ ಸಂಪೂರ್ಣ ಮಾಲೀಕರಾಗಿ ಹಕ್ಕುದಾರರಾಗಿ ಷೆಡ್ಯೂಲ್ ಸ್ವತ್ತಿನ ಎಲ್ಲಾ ವಿಧದ ಖಾತೆಗಳನ್ನು ನಿಮ್ಮ ಹೆಸರಿಗೆ ವರ್ಗಾಯಿಸಿಕೊಂಡು ನಿಮ್ಮ ಇಷ್ಟಾನುಸಾರ ಕ್ರಯ, ದಾನ, ಪರಿವರ್ತನೆಗಳೆಂಬ ವ್ಯವಹಾರಗಳಲ್ಲಿ ಸ್ವತಂತ್ರರಾಗಿ ವ್ಯವಹರಿಸಲು ಮತ್ತು ಸದರಿ ಸ್ವತ್ತಿನಲ್ಲಿ ಸಿಗಬಹುದಾದ ನಿಧಿ, ನಿಕ್ಷೇಪ, ಜಲ, ತರು ಪಾಷಾಣಾಧಿ, ಅಷ್ಟಭೋಗ, ತೇಜ, ಸೌಮ್ಯಂಗಳಿಗೂ ಅವುಗಳ ಆದಿ ಕ್ರಯ ದಾನ ಪರಿವರ್ತನೆಗಳೆಂಬ ಎಲ್ಲಾ ವ್ಯವಹಾರ ಚತುಷ್ಟಯಂಗಳಿಗೂ ಭಾದ್ಯರಾಗಿ ನಿಮ್ಮ ಪುತ್ರ ಪೌತ್ರ ವಂಶಪಾರಂಪರ್ಯವಾಗಿ ಎಲ್ಲಾ ಕಾಲಕ್ಕೂ ಸುಖವಾಗಿ ಅನುಭವಿಸಿಕೊಂಡು ಬರುವುದು.

ಷೆಡ್ಯೂಲ್ ಸ್ವತ್ತು ಪರಭಾರೆ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು ವಗೈರೆಗಳಿಗೆ ಮತ್ತು ಇತರ ಹಕ್ಕುಗಳಿಗೆ ಈಡಾಗಿರುವುದಿಲ್ಲವೆಂದು ಪೂರ್ಣ ನಂಬಿಕೆ ಮತ್ತು ಭರವಸೆ ಕೊಟ್ಟಿರುತ್ತೇವೆ.

ಷೆಡ್ಯೂಲ್ ಸ್ವತ್ತನ್ನು ನಾವು ಈ ದಿವಸ ನಿಮಗೆ ಶುದ್ಧ ಕ್ರಯಕ್ಕೆ ಕೊಟ್ಟಿರುವುದೇ ವಿನಹ ಈ ಹಿಂದೆ ಮತ್ತ್ಯಾರಿಗೂ ಆಧಾರ, ಭೋಗ್ಯ, ಕ್ರಯ, ಒಪ್ಪಂದ, ದಾನ, ರಿಲೀಸ್, ವ್ಯವಸ್ಥೆ ಯಾವ ರೀತಿಯ ಪರಭಾರೆ ವಗೈರೆ ಮಾಡಿರುವುದಿಲ್ಲ ಮತ್ತು ಯಾವ ಬ್ಯಾಂಕುಗಳಿಗಾಗಲೀ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಹಣಕಾಸು ಸಂಸ್ಥೆಗಳಿಗಾಗಲೀ ಅಥವಾ ಇನ್ಯಾವುದೇ ಸಂಸ್ಥೆಗಳಿಗಾಗಲೀ ಸದರಿ ಸ್ವತ್ತನ್ನು ಈಡು ಮಾಡಿ ಸಾಲ ಪಡೆದಿರುವುದಿಲ್ಲ. ಅಂತಹ ಯಾವುದೇ ವಿಧವಾದ ತಂಟೆ ತಕರಾರು ಕಂಡುಬಂದಲ್ಲಿ ಅದನ್ನು ನಾವೇ ನಮ್ಮ

ಕರ್ನಾಟಕ ಸರ್ಕಾರ
Government of Karnataka
ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

This sheet can be used for any document

Date of execution :

Total stamp duty paid Rs.



ಸ್ವಂತ ಖರ್ಚಿನಿಂದ ಖುದ್ದು ನಿಂತು ಪರಿಹರಿಸಿಕೊಡುತ್ತೇವೆ. ಹಾಗೇನಾದರೂ ಪರಿಹರಿಸಿಕೊಡಲು ತಪ್ಪಿದಲ್ಲಿ ಅದರಿಂದ ನಿಮಗೆ ಉಂಟಾಗಬಹುದಾದ ವಿಶಿಷ್ಟ ಖರ್ಚು ವೆಚ್ಚ ನಷ್ಟವನ್ನು ನಮ್ಮಿಂದಲೂ ನಮ್ಮ ಇತರ ಚರಸ್ಥಿರ ಆಸ್ತಿಗಳಿಂದ ವಸೂಲು ಮಾಡಿಕೊಳ್ಳಲು ನೀವು ಹಕ್ಕುಳ್ಳವರಾಗಿರುತ್ತೀರಿ.

ಕ್ರಯದ ಸ್ವತ್ತಿನಲ್ಲಿ ಇಲ್ಲಿಂದ ಮುಂದೆ ನಮಗಾಗಲೀ ನಮ್ಮ ಪರ ಮತ್ತ್ಯಾರಿಗೆ ಆಗಲಿ ಯಾವ ವಿಧವಾದ ಹಕ್ಕುಬಾಧ್ಯತೆಗಳೂ ಸಹ ಇರುವುದಿಲ್ಲ ಎಂದು ಒಪ್ಪಿ ಬರೆದುಕೊಟ್ಟ ಸ್ಥಿರ ಸ್ವತ್ತಿನ ಶುದ್ಧ ಕ್ರಯಪತ್ರ ಸಹಿ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕುಂಬರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 69/4 ರಲ್ಲಿರುವ ಕೆಂಪಣ್ಣ, ಕರಿಯಪ್ಪ ಮತ್ತು ಸಿದ್ದಯ್ಯರವರ ಜಂಟಿ ಖಾತೆ ಬಾಬ್ತು 1-14(ಒಂದು ಎಕರೆ ಹದಿನಾಲ್ಕು ಗುಂಟೆ) ಖುಷ್ಕಿ ಜಮೀನಿಗೆ ಚೆಕ್ಕುಬಂದಿ.

ಪೂರ್ವಕ್ಕೆ : ಸರ್ವೆ ನಂ.69/6 ರ ಜಮೀನು

ಪಶ್ಚಿಮಕ್ಕೆ : ಸರ್ವೆ ನಂ.69/1 ರ ಜಮೀನು

ಉತ್ತರಕ್ಕೆ : ಸರ್ವೆ ನಂ.69/4 ರ ಉಳಿಕೆ ಜಮೀನು

ದಕ್ಷಿಣಕ್ಕೆ : ಸರ್ವೆ ನಂ.68 ರ ಜಮೀನು

ಈ ಮಧ್ಯೆ ಇರುವ 1-14(ಒಂದು ಎಕರೆ ಹದಿನಾಲ್ಕು ಗುಂಟೆ) ಖುಷ್ಕಿ ಜಮೀನನ್ನು ವಿಶಿಷ್ಟ ಹಕ್ಕುಗಳೊಡನೆ ಶುದ್ಧಕ್ರಯಕ್ಕೆ ನಿಮಗೆ ಕೊಟ್ಟಿರುತ್ತೇವೆಂದು ಒಪ್ಪಿ ನಮ್ಮ ಆತ್ಮ ಸಂತೋಷದಿಂದಲೂ ಮತ್ತು ಖುದ್ದು ರಾಜಿಯಿಂದಲೂ ಬರೆದುಕೊಟ್ಟ ಸ್ಥಿರಸ್ವತ್ತಿನ ಶುದ್ಧ ಕ್ರಯಪತ್ರದ ಸಹಿ.